**ಪಿ ಡಬ್ಲ್ಯು 1**

**<u>ದಿನಾಂಕಃ 16.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: 1 ರಿಂದ 3 ನೇ ಪ್ರತಿವಾದಿ ಪರ ಶ್ರೀ ಕೆ ವಿ ಎಂ ವಕೀಲರಿಂದಃ-</u>**

1) 1981 ನೇ ಇಸವಿಯಲ್ಲಿ ನನಗೆ 15 ರಿಂದ 16 ವರ್ಷ ವಯಸ್ಸಾಗಿತ್ತು. 1981 ನೇ ಇಸವಿಯಲ್ಲಿ ನನ್ನ ತಂದೆಗೆ ಸುಮಾರು 60 ವರ್ಷ ವಯಸ್ಸಾಗಿತ್ತು. ಈ ದಾವಾದ ಆಸ್ತಿಯ ಸರ್ವೆ ನಂ 189/2 ಇರುತ್ತದೆ. ದಾವಾ ಆಸ್ತಿಯ ಹಳೆ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸ ನಂ 189/2 ಒಟ್ಟು 11 ಎಕರೆ 10 ಗುಂಟೆ ವಿಸ್ತೀರ್ಣ ಇರುತ್ತದೆ. ಸದರಿ ಜಮೀನು ಮೊದಲು ಸರ್ಕಾರಿ ಜಮೀನಾಗಿದ್ದು ದರಖಾಸ್ತು ಮೂಲಕ ನನಗೆ ಬಂದಿರುತ್ತದೆ. ಸ ನಂ 189/2 ರ ಒಟ್ಟು 11 ಎಕರೆ 10 ಗುಂಟೆ ಜಮೀನಿನಲ್ಲಿ ನನ್ನ ಜಮೀನು ಮಧ್ಯ ಭಾಗದಲ್ಲಿ ಬರುತ್ತದೆ. ಸದರಿ ಜಮೀನಿನ ದಕ್ಷಿಣ ಭಾಗದಲ್ಲಿ 4 ಎಕರೆ ಜಮೀನು 2 ನೇ ಪ್ರತಿವಾದಿ ತಂದೆ ಶಾಂತವೀರಪ್ಪನವರಿಗೆ ಮಂಜೂರಾಗಿರುತ್ತದೆ. ಸದರಿ ಜಮೀನಿನ ಉತ್ತ ರ ಭಾಗದ 3 ಎಕರೆ 10 ಗುಂಟೆ ಶಿವಪ್ಪ ಎನ್ನುವವರಿಗೆ ಮಂಜೂರಾಗಿರುತ್ತದೆ.

2) ಬಸಪ್ಪ ಬಿನ್ ದ್ಯಾವಪ್ಪ ಮೈಸೂರು ನನ್ನ ತಂದೆ ಎಂದರೆ ಸರಿ. ದಾವಾ ಸ್ವತ್ತು ಕಲ್ಮನೆ ಸರ್ವೆ ನಂಬರ್ ಆಗಿರುತ್ತದೆ. ದಾವಾ ಆಸ್ತಿಗೂ ಮತ್ತು ನಮ್ಮ ಮನೆಗೂ 3 ಕಿಮೀ ಅಂತರ ವಿರುತ್ತದೆ. ದಾವಾ ಆಸ್ತಿಯು ಕಲ್ಲು ಗೊಚ್ಚಿನ ಖುಷ್ಕಿ ಜಮೀನು ಆಗಿರುತ್ತದೆ. ದಾವಾ ಆಸ್ತಿಯು ಬೆಳೆ ಬೆಳೆಯಲು ಯೋಗ್ಯವಾಗಿರಲಿಲ್ಲ ಎಂದರೆ ಸಾಕ್ಷಿಯು ಉಳುಮೆ ಮಾಡಿದರೆ ಬೆಳೆ ಬೆಳೆಯ ಬಹುದು. 1981 ನೇ ಇಸವಿ ಸಂದರ್ಭದಲ್ಲಿ ದಾವಾ ಆಸ್ತಿಗೆ ಕಾಲುವೆ ಮೂಲಕ ನೀರಿನ ಸಂಪರ್ಕ ಇರಲಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ 1981 ನೇ ಇಸವಿಯಲ್ಲಿ ಕೊಳವೆ ಬಾವಿ ಸಹ ಇರಲಿಲ್ಲ ಎಂದರೆ ಸರಿ. ದಾವಾ ಆಸ್ತಿಗೆ ನೀರಿನ ಲಭ್ಯತೆ ಇಲ್ಲದೇ ಕಾರಣ ಅದು ನಮ್ಮ ವಾಸ ಸ್ಥಾನದಿಂದ ದೂರ ಇರುವ ಕಾರಣ

ದಿನಾಂಕ 24-04-1981 ರಂದು ನಮ್ಮ ತಂದೆಯವರು 2,500-00 ರೂಪಾಯಿಗಳಿಗೆ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿ ಗಂಡನಾದ ಶ್ರೀಧರ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನಮ್ಮ ತಂದೆಯವರು ಮಾರಾಟ ಮಾಡಿರುವುದಿಲ್ಲ. ದಿನಾಂಕ 24-04-1981 ರ ನಂತರ ಶ್ರೀಧರ ಎನ್ನುವವರು ದಾವಾ ಆಸ್ತಿಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಅವರು ಸ್ವಾಧೀನದಲ್ಲಿ ಇರುವುದಿಲ್ಲ. ದಿನಾಂಕ 24-04-1981 ರಂದು ದಾವಾ ಆಸ್ತಿಗೆ ಸಂಬಂಧಿಸಿ ಕ್ರಯ ಪತ್ರ ಬರೆದುಕೊಟ್ಟ ಸಂದರ್ಭದಲ್ಲಿ ನನ್ನ ತಂದೆಗೆ 45 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಸಹಿ ಮಾಡಲು ಬರುತ್ತಿರಲಿಲ್ಲ ಅವರು ಹೆಬ್ಬಿಟ್ಟಿನ ಗುರುತು ಹಾಕುತ್ತಿದ್ದರು. ನನ್ನ ತಂದೆ ನಿಶಾನೆ ಡಿ-1 ನ್ನು ಹೊರತುಪಡಿಸಿ ಇನ್ನೆಲ್ಲೂ ಹೆಬ್ಬಿಟ್ಟಿನ ಸಹಿ ಹಾಕಿರುವ ದಾಖಲೆಗಳು ಇರುವುದಿಲ್ಲ. ನಿಶಾನೆ ಡಿ-1 ಕ್ಕೆ ಸಾಕ್ಷಿಗಳಾಗಿ ಸಹಿ ಹಾಕಿರುವ ಎಸ್ ಎಚ್ ಸುರೇಶ ಮತ್ತು ಹೆಚ್ ವೈ ಚಂದ್ರಶೇಖರ ಅವರು ನಮ್ಮ ಊರಿನವರೇ ಎಂದರೆ ಸರಿ. ಸದರಿ ಹೆಚ್ ವೈ ಚಂದ್ರಶೇಖರ್ ರವರು ನನಗೆ ಮಾವನಾಗಬೇಕು. ಸದರಿ ಹೆಚ್ ವೈ ಚಂದ್ರಶೇಖರ್ ರವರು ಊರಿನಲ್ಲಿ ಸಾಮಾನ್ಯವಾಗಿ ಪಂಚಾಯತಿಗಳಲ್ಲಿ ಭಾಗವಹಿಸುತ್ತಿದ್ದರು ಎಂದರೆ ಸಾಕ್ಷಿಯು ಸದರಿಯವರು ಊರಿನ ಯಜಮಾನರಾಗಿದ್ದರಿಂದ ಎಲ್ಲಾ ಪಂಚಾಯತಿಗಳಲ್ಲಿ ಪಾಲ್ಗೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ಸದರಿಯವರು ನ್ಯಾಯಾಲಯಗಳಲ್ಲಿ ಅನೇಕ ಪ್ರಕರಣಗಳಲ್ಲಿ ಸಾಕ್ಷಿ ನುಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ಯಾರೇ ಸಾಕ್ಷಿ ನುಡಿಯಲು ಕರೆದರು ಬಂದು ಕರೆದವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದರು ಎಂದರೆ ಸರಿಯಲ್ಲ. ಅವರು ನ್ಯಾಯಾಲಯದ ಖಾಯಂ ಸಾಕ್ಷಿಯಾಗಿದ್ದರು ಅಂದರೆ ಸರಿಯಲ್ಲ.

3) ಹೆಚ್ ವೈ ಚಂದ್ರಶೇಖರ್ ರವರು ತಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹಾಕಿರುವ ಸಹಿ ಮತ್ತು ನಿಶಾನೆ ಡಿ-1 ರಲ್ಲಿರುವ ಸಹಿಯು ಅವರದೇ ಆಗಿರುತ್ತದೆ ಎಂದರೆ ಸರಿಯಲ್ಲ. ಪಿಡಬ್ಲ್ಯು-3 ಎಸ್ ಎಚ್ ಸುರೇಶ ಅವರು ವೃತ್ತಿಯಲ್ಲಿ ಶಿಕ್ಷಕರಾಗಿದ್ದು ಅವರ ಜಮೀನು ನಮ್ಮ ಜಮೀನಿನ ಪಕ್ಕದಲ್ಲಿ ಇತ್ತು, ಅವರು ನಮ್ಮ ಜಮೀನಿನ ಪಕ್ಕದಲ್ಲಿರುವ ತಮ್ಮ ಜಮೀನನ್ನು ಸುಮಾರು 20 ವರ್ಷಗಳ ಹಿಂದೆಯೇ ಮಾರಾಟ ಮಾಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ಹೇಳಿರುವ ಎಲ್ಲಾ ವಿಚಾರಗಳು ನನಗೆ ಗೊತ್ತು. P W 3 ಸುರೇಶ ರವರು ನಿಶಾನೆ ಡಿ-1 ಕ್ಕೆ ಸಾಕ್ಷಿಯಾಗಿ ಸಹಿ ಹಾಕುವಾಗ ಅಪ್ರಾಪ್ತ ವಯಸ್ಕರಾಗಿದ್ದರು ಎಂದು ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿಯಲ್ಲ. P W 3 ಸುರೇಶ ರವರು ನಿಶಾನೆ ಡಿ-1 ಕ್ಕೆ ಸಹಿ ಹಾಕುವ ಸಂದರ್ಭದಲ್ಲಿ ಪದವಿ ವಿದ್ಯಾಭ್ಯಾಸ ಮಾಡುತ್ತಿದ್ದರು. ನಿಶಾನೆ ಡಿ -1 ಕ್ಕೆ P W 3 ಸುರೇಶ ರವರು ಸಹಿ ಮಾಡುವ ಸಂದರ್ಭದಲ್ಲಿ ಅವರು ಪ್ರಾಪ್ತ ವಯಸ್ಕರಾಗಿದ್ದರು ಎಂದರೆ ಸಾಕ್ಷಿಯು ಆ ಸಂದರ್ಭದಲ್ಲಿ ಸುರೇಶ ಅವರು ಪದವಿ ವಿದ್ಯಾಭ್ಯಾಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಶಾನೆ ಡಿ-1 ರಲ್ಲಿ ಇರುವ P W 3 ಸುರೇಶ ರವರ ಸಹಿ ಮತ್ತು ಸದರಿಯವರ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ಸಹಿಯು ಒಂದೇ ಆಗಿರುತ್ತದೆ ಎಂದರೆ ಸರಿಯಲ್ಲ. P W 3 ಸುರೇಶ ಮತ್ತು ಹೆಚ್ ವೈ ಚಂದ್ರಶೇಖರಪ್ಪ ರವರು ವಿದ್ಯಾವಂತರು ಎಂದರೆ ಸರಿ.

4) ನಿಶಾನೆ ಡಿ-1 ಕ್ಕೆ ಸುರೇಶ ಮತ್ತು ಚಂದ್ರಶೇಖರಪ್ಪ ನವರಿಂದ ಸಾಕ್ಷಿ ಗಳಾಗಿ ಸಹಿ ಹಾಕಲು ನಮ್ಮ ತಂದೆಯವರೇ ಆಹ್ವಾನಿಸಿದ್ದರು ಎಂದರೆ ಸರಿಯಲ್ಲ. ನನ್ನ ತಂದೆಯವರು ಯಾವಾಗ

ಮರಣ ಹೊಂದಿರುತ್ತಾರೆ ಎಂದು ಹೇಳಲು ನನಗೆ ನಿಖರವಾಗಿ ದಿನಾಂಕ ನೆನಪಿರುವುದಿಲ್ಲ ಆದರೆ ಸುಮಾರು 10 -12 ವರ್ಷಗಳ ಹಿಂದೆ ಕಾಲವಾಗಿರುತ್ತಾರೆ. ಪ್ರಸುತ ದಾವೆಯನ್ನು ದಾಖಲಿಸುವ 3-4 ವರ್ಷಗಳ ಹಿಂದೆಯೇ ನಮ್ಮ ತಂದೆಯವರು ಕಾಲವಾಗಿರುತ್ತಾರೆ. ಪ್ರಸುತ್ತ ದಾವೆ ದಾಖಲಿಸುವ 10-15 ವರ್ಷಗಳ ಹಿಂದೆಯೇ ನಮ್ಮ ತಂದೆ ಕಾಲವಾಗಿದ್ದರೂ ನಾನು ಅವರು ಈ ದಾವೆ ದಾಖಲಿಸುವ ಕೇವಲ 3-4 ವರ್ಷಗಳ ಹಿಂದೆ ಕಾಲವಾಗಿರುತ್ತಾರೆ ಎಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರ ಮರಣಾ ನಂತರ ದಾವಾ ಸ್ವತ್ತಿನ ಖಾತೆ ಮತ್ತು ಪಹಣಿ ಬದಾಲಾಯಿಸಲು 2013 ರಲ್ಲಿ ಅರ್ಜಿ ಸಲ್ಲಿಸಿದ್ದೆವು. ನಮ್ಮ ತಂದೆಯವರು 2013 ಕ್ಕೂ ಮೊದಲೇ ಮರಣ ಹೊಂದಿದ್ದರೂ ನಾವು ದಾವಾ ಸ್ವತ್ತಿನ ಖಾತೆ, ಪಹಣಿ ಬದಲಾವಣೆಗಾಗಿ 2013 ಕ್ಕೂ ಮೊದಲೇ ಅರ್ಜಿ ಸಲ್ಲಿಸಿರಲಿಲ್ಲ ಎಂದರೆ ಸರಿ. ದಾವಾ ಆಸ್ತಿಯನ್ನು ನಮ್ಮ ತಂದೆಯವರು 1981 ರಲ್ಲಿ ಮಾರಾಟ ಮಾಡಿದ ನಂತರ ಎಂದಿಗೂ ದಾವಾ ಆಸ್ತಿಯಲ್ಲಿ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ರಾಗಿ, ಜೋಳವನ್ನು ಬೆಳೆದಿರುತ್ತಾರೆ ಆದರೆ ಯಾವ ವರ್ಷದವರೆಗೆ ಸಾಗುವಳಿ ಮಾಡಿದ್ದಾರೆ ಎಂದು ನೆನಪಿಲ್ಲ.

5) 1981 ನೇ ಇಸವಿಯಲ್ಲಿ ನಮ್ಮ ತಂದೆಯವರು ದಾವಾ ಆಸ್ತಿಯಲ್ಲಿ ಮೆಕ್ಕೆ ಜೋಳವನ್ನು ಬೆಳೆದಿದ್ದರು. ನಮ್ಮ ತಂದೆಯವರು 1981 ನೇ ಇಸವಿಯಲ್ಲಿ ದಾವಾ ಆಸ್ತಿಯಲ್ಲಿ 70-80 ಚೀಲ ಮೇಕ್ಕೆ ಜೋಳವನ್ನು ಬೆಳೆಯುತ್ತಿದ್ದರು. 1982-83 ನೇ ಇಸವಿಯಲ್ಲಿ ನಮ್ಮ ತಂದೆಯವರು ದಾವಾ ಆಸ್ತಿಯಲ್ಲಿ ಅಡಿಕೆ, ಬಾಳೆ ಬೆಳೆದಿದ್ದರು. 1982 ರಲ್ಲಿ ನಮ್ಮ ತಂದೆಯವರು ದಾವಾ ಆಸ್ತಿಯಲ್ಲಿ ಜೆ ಕೆ ಕಂಪನಿಯವರಿಂದ 1,20,000-00 ವ್ಯಯಿಸಿ ಕೊಳವೆ ಬಾವಿಯನ್ನು

ಕೊರೆಯಿಸಿದ್ದರು, ಸದರಿ ಕೊಳವೆ ಬಾವಿಯನ್ನ ಕೊರೆಯಿಸಿದ್ದರ ಬಗ್ಗೆ ಯಾವುದೇ ರಶೀದಿಗಳು ಇರುವುದಿಲ್ಲ. ದಾವಾ ಆಸ್ತಿಯಲ್ಲಿ ಬೆಳೆದ ಅಡಿಕೆ ಬೆಳೆಗೆ ಈಗ 4-5 ವರ್ಷ ಆಗಿರಬಹುದು. 1981 ರಲ್ಲಿ ನಮ್ಮ ತಂದೆಯವರು ದಾವಾ ಆಸ್ತಿಯಲ್ಲಿ ಜೋಳವನ್ನು, 1982 ರಲ್ಲಿ ಅಡಿಕೆ ಮತ್ತು ಬಾಳೆಯನ್ನು ಬೆಳೆದಿದ್ದಾರೆ ಎಂದು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಶಾನೆ ಡಿ-1 ನ್ನು ಪ್ರಶ್ನಿಸಿ ನಮ್ಮ ತಂದೆಯವರು ಅವರ ಜೀವಿತ ಕಾಲವಧಿಯಲ್ಲಿ ಯಾವುದೇ ದಾವೆಯನ್ನು ದಾಖಲಿಸಿರುವುದಿಲ್ಲ ಎಂದರೆ ಸಾಕ್ಷಿಯು ಅವರು ದಾವಾ ಆಸ್ತಿಯನ್ನು ಮಾರಾಟ ಮಾಡಿರದೇ ಇದುದರಿಂದ ದಾವೆ ದಾಖಲಿಸಿರಲಿಲ್ಲ. ನಮ್ಮ ತಂದೆಯವರ ಮರಣಾ ನಂತರ ನಾನು ಸುರೇಶ ಮತ್ತು ಚಂದ್ರಶೇಖರಪ್ಪನವರ ಜೊತೆ ಶಾಮಿಲಾಗಿ ಪ್ರಸ್ತುತ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಕುರಿತಂತೆ ನಮ್ಮ ತಂದೆಯವರು ನಿಶಾನೆ ಡಿ-1 ರಂತೆ ಶುದ್ಧ ಕ್ರಯ ಪತ್ರ ಮಾಡಿಕೊಟ್ಟ ಕಾರಣ ದಾವಾಆಸ್ತಿಯ ಕುರಿತಂತೆ ಯಾವುದೇ ತಕರಾರನ್ನು ಅವರ ಜೀವಿತ ಕಾಲದಲ್ಲಿ ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಕುರಿತಂತೆ ಎಂ ಆರ್ ನಂ 56/82-83 ಎಂದು 1 ನೇ ಪ್ರತಿವಾದಿಯ ಗಂಡನ ಹೆಸರಿಗೆ ಮುಟೇಶನ್ ದಾಖಲೆ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಕಂದಾಯ ಇಲಾಖಾ ಅಧಿಕಾರಿಗಳೊಂದಿಗೆ ಶಾಮಿಲಾಗಿ ಎಂ ಆರ್ ನಂ 15/2012-13 ನ್ನು ನನ್ನ ಹೆಸರಿಗೆ ಮುಟೇಶನ್ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮುಟೇಶನ್ ದಾಖಲೆಯನ್ನು ದಿನಾಂಕ 3-1-2013 ರ ಆದೇಶದಂತೆ ಎ ಸಿ ನ್ಯಾಯಾಲಯದಲ್ಲಿ ರದ್ದುಗೊಳಿಸಿ 1 ನೇ ಪ್ರತಿವಾದಿ ಗಂಡನ ಹೆಸರಿಗೆ ಮುಟೇಶನ್ ದಾಖಲಿಸಲು ಆದೇಶ ಆಗಿರುತ್ತದೆ ಎಂದರೆ ನನಗೆ ಯಾವುದೇ ನೋಟೀಸು ಬರದ ಕಾರಣ ಸದರಿ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ನಾನು

ಸಲ್ಲಿಸಿರುವ ದಾವೆಯು ಕಾಲಮಿತಿಯಿಂದ ಹೊರಗೆ ಇದೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು

ಜೆ .ಎಂ.ಎಫ್.ಸಿ. ಶಿಕಾರಿಪುರ.

ಪ್ರತಿವಾದಿಗಳು ಮತ್ತು ಪ್ರತಿವಾದಿ ಪರ ವಕೀಲರುಗೈರು ಹಾಜರಿದ್ದು ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರಣ ಇಲ್ಲದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಪ್ರತಿವಾದಿ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು**

**ಈಗಾಗಲೇ ಸಾಕಷ್ಟು ಕಾಲವಕಾಶ ನೀಡಿದ್ದು , ಆದ್ದರಿಂದ ಪಾಟೀ ಸವಾಲು ಮುಂದೂಡಲು ಯಾವುದೇ ಸಕಾರವಾದ ಕಾರಣ ಇಲ್ಲದೇ ಇದ್ದುದರಿಂದ ಪಾಟೀ ಸವಾಲು ಮುಕ್ತಾಯ ಎಂದು ತೆಗೆದುಕೊಳ್ಳಲಾಯಿತು.**